Mr. SPEAKER.—That can be amended he says.

Sri H. SIDDAVEERAPPA.—All these questions will have to be examined. As I have already said, this is a matter which is receiving the very sympathetic consideration of the Government. Some of the preliminaries will have to be attended to at the proper time.

Mr. SPEAKER.—What does the Hon'ble Member Sri C. T. Hanumanthaiya propose to do with his resolution?

(A few members rose.)

Mr. SPEAKER.—That is why I gave chance to three members. Now, what does Sri C. T. Hanumanthaiya propose to do?

(Sri K. PRABHAKAR rose.)

Mr. SPEAKER.—Will the Hon'ble Member kindly resume his seat ?

ಶ್ರೀ ಸಿ. ಟಿ. ಹನುಮಂತಯ್ಯ.—ಸರ್ಕಾರದವರು ಕೊಟ್ಟಿರತಕ್ಕ ಭರವಸೆಯಮೇರೆಗೆ ನಾನು ಸೂಚಿಸಿರತಕ್ಕ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The resolution was, by leave, withdrawn.

No. 20.—Industrial Production Centre in Nelamangala Taluk.

Sri K. PRABHAKAR (Nelamangala—Scheduled Castes).—Sir, I beg to move :

"That this Assembly is of the opinion that an Industrial Production Centre be started in Nelamangala Taluk to improve the most deplorable economic conditions of the labourers in the taluk."

ಸ್ವಾಮಿ, ನೆಲಮಂಗಲ ತಾಲ್ಲೂಕು ಅನೇಕ ಇತರ ತಾಲ್ಲೂಕುಗಳಿಗಿಂತ ಎಷ್ಟೋ ವಿಚಾರಗಳಲ್ಲಿ ಬಹಳ ಜೆನ್ನಾಗಿದೆ ಮತ್ತು ಹಿಂದುಳಿದಿದೆ. ಈ ತಾಲ್ಲೂಕು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿಗೆ ಹದಿನೈದು ಮೈಲಿ ದೂರದಲ್ಲಿರುವುದರಿಂದ ಚಿಕ್ಕ ಪುಟ್ಟ ಸಾಮಾನು ಬೇಕಾದರೂ ಸಹ ಬೆಂಗಳೂರಿಗೆ ಬಂದು ತೆಗೆದುಕೊಂಡು ಹೋಗುವುದಕ್ಕಾಗಲಿ, ವ್ಯಾಪಾರಾಭಿವೃದ್ಧಿಗಾಗಲಿ ಸಾಧ್ಯವಿಲ್ಲ. ಕೈಗಾರಿಕಾ ದೃಷ್ಟಿಯಿಂದ ನೋಡಿದರೆ ನೆಲಮಂಗಲ ತಾಲ್ಲೂಕಿನಲ್ಲಿ ಯಾವ ವಿಧವಾದ ಕೈಗಾರಿಕಾ ಫ್ಯಾಕ್ಟರಿಯೂ ಇಲ್ಲ. ನೆಲಮಂಗಲದಲ್ಲಿ ಯಾವ ಕೈಗಾರಿಕೆಯನ್ನು ಸ್ಥಾಪಿಸಿದರೆ ಅನುಕೂಲವೆಂಬ ಬಗ್ಗೆ ಸ್ವಲ್ಪಮಟ್ಟಿಗೆ ಪ್ರಯತ್ನ ನಡೆದು, ಅಲ್ಲಿ 8-10 ಸಾವಿರ ರೂಪಾಯಿಗಳಲ್ಲಿ ಒಂದು tiles factory ಸ್ಥಾಪಿಸುವ ಉದ್ದೇಶವಿಟ್ಟುಕೊಂಡು, ಅನಂತರ ಸರ್ಕಾರದವರು ಹಾಗೆಯೇ ಕೈಬಿಟ್ಟರು. ಅನಂತರ ನೆಲಮಂಗಲದ ಮುನಿಸಿಪಲ್ ಹೈಸ್ಕೂಲನ್ನು ಸರ್ಕಾರಿ ಸ್ಕೂಲ್ ಆಗಿ ಪರಿವರ್ತಿಸಿ ಅದರಿಂದ ಅಭಿವೃದ್ಧಿ ಕಾರ್ಯ ಪೆಸಗಲು ಅಲ್ಲಿಯ ಜನರು ಒಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದರು. ಅದೂ ಸಹ ಕಾರ್ಯಗತವಾಗಲಿಲ್ಲ. ಸರ್ಕಾರದವರು ಏರ್ಪಡಿಸಿರತಕ್ಕಂಥ ಒಂದು ಕೈಗಾರಿಕಾ ಸ್ಕೂಲ್ ನೆಲಮಂಗಲದಲ್ಲಿದೆ. ಅದರ ಬಿಲ್ಡಿಂಗ್ ಸಹ ದೊಡ್ಡದಾಗಿದೆ. ಅಲ್ಲಿ ದೊಡ್ಡ ಫ್ಯಾಕ್ಟರಿಯೊಂದನ್ನು ನಡೆಸಬಹುದು. ಅಲ್ಲಿ ವೀವಿಂಗ್, ಆಟದ ಸಾಮಾನು ತಯಾರಿಸುವ ಕೆಲಸಗಳು ನಡೆಯುತ್ತಿದೆ, ಚನ್ನಪಟ್ಟಣದ ಬಣ್ಣದ ಸಾಮಾನು ಸಹಾ ಮಾಡುತ್ತಾರೆ. ಆದರೆ ಈ ಸ್ಕೂಲ್ ತಾನೇ ಸ್ವಂತವಾಗಿ ತಯಾರಿಕೆಯ ಕಾರ್ಯದಲ್ಲಿ ಸ್ವತಂತ್ರವಾಗಿ ಮುನ್ನುಗ್ಗಲು ಶಕ್ತಿ ಪಡೆದಿಲ್ಲ. ಈ ರೀತಿ ನಾನಾ ಕಾರಣಗಳಿಂದ ಇದು ಮುಂದುವರಿಯದೇ ಸರ್ಕಾರದ ಉದ್ದೇಶ ಕೇವಲ ಶೇಕಡಾ ಒಂದು ಸಹ ಸಫಲವಾಗಿಲ್ಲ. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಇದನ್ನು ಒಂದು ಇಂಡಸ್ಟ್ರಿಯಲ್ ಪ್ರೊಡಕ್ಷನ್ ಸೆಂಟರ್ ಆಗಿ ಪರಿವರ್ತನೆ ಮಾಡಿ, ಇದನ್ನು ಸ್ಪೆಷಲ್ ವೀವಿಂಗ್ ಸೆಂಟರ್ ಆಗಿ ಪರಿವರ್ತನೆ ಮಾಡಿ ಕೆಲಸಕಾರ್ಯಗಳನ್ನು ಹುರುಪಿನಿಂದ ನಡೆಸಲು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡರೆ ಸುಮಾರು 500 ಜನರಿಗೆ ಕೆಲಸ ದೊರಕುವುದಲ್ಲದೆ ಈ ತಾಲ್ಲೂಕಿಗೂ ಅನುಕೂಲವಾಗುತ್ತದೆ. ಇದರಿಂದ ಈಗಾಗಲೇ ಬಹುಮಟ್ಟಿಗೆ ಹದಗೆಟ್ಟಿರುವ ಇಲ್ಲಿನ ಜನರ ಆರ್ಥಿಕಸ್ಥಿತಿಯನ್ನು ಸಹ ಉತ್ತಮಗೊಳಿಸಿದಂತಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಈ ನನ್ನ ನಿರ್ಣಯ ರೂಪದ ಸಲಹೆಗೆ ಪೂರ್ಣ ಪುರಸ್ಕಾರ ಕೊಡುತ್ತಾರೆಂದು ಭಾವಿಸಿ ಅದನ್ನು ಸಭೆಯ ಮೂಲಕ ಸರ್ಕಾರದ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved:

"That this Assembly is of the opinion that an Industrial Production Centre be started in Nelamangala Taluk to improve the most deplorable economic conditions of the labourers in the taluk."

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಸಂಸ್ಥಾನದಲ್ಲಿ ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದು ಮುಖ್ಯ ವಿಚಾರವಾಗಿದೆ. ಕಾರಣ, ರೇಷ್ಮೆ ಕೈಗಾರಿಕೆಯಲ್ಲಿ ನಿರತರಾಗಿರುವ ರೈತರು ಬಹಳ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಈ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಬೇಕಾದ ಅನುಕೂಲತೆ ಮಾಡಿ ಸಂಸ್ಥಾನಾದ್ಯಂತ ಈ ಕೈಗಾರಿಕೆಯನ್ನು ಉತ್ತಮಪಡಿಸುವುದಕ್ಕೆ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು ಅವಶ್ಯಕ. ಈ ದೃಷ್ಟಿಯಿಂದ ನೆಲಮಂಗಲದಲ್ಲಿ ರೇಷ್ಮೆ ಕೈಗಾರಿಕೆಯ ಸ್ಥಾಪನೆಗೆ ಅನುಕೂಲ ಕಲ್ಪಿಸಬೇಕೆಂದು ಸೂಚನೆ ಮಾಡುತ್ತೇನೆ.

*ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಶ್ರೀ ಪ್ರಭಾಕರ್‌ರವರು ಅವರ ಕ್ಷೇತ್ರದ ಬೆಳವಣಿಗೆಯ ದೃಷ್ಟಿಯಿಂದ ಕೆಲವು ಅಂಶಗಳನ್ನು ಈ ಸಭೆಯ ಸದಸ್ಯರ ಮನಸ್ಸಿಗೆ ನಾಟುವ ಹಾಗೆ ತಿಳಿಸಿರುತ್ತಾರೆ. ಆದರೆ ಈ ನಿರ್ಣಯದಲ್ಲಿ ಸೂಚಿಸಿರುವ ಸಲಹೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವೇ ಎಂಬುದನ್ನು

(ಶ್ರೀ ಎಚ್. ಸಿದ್ದವೀರಪ್ಪ.)

ನಾವು ಯೋಚನೆ ಮಾಡಬೇಕು. ಶ್ರೀಮಾನ್ ಪಾಪಣ್ಣ ನವರು ಈ ವಿಚಾರದಲ್ಲಿ ಮಾತನಾಡುತ್ತಾ ಇರತಕ್ಕ ಕೈಗಾರಿಕೆಯನ್ನು ಮೊದಲು ಅಭಿವೃದ್ಧಿಗೆ ತರುವ ವಿಚಾರವನ್ನು ಸೂಚಿಸಿರುತ್ತಾರೆ. ಈ ವಿಚಾರದಲ್ಲಿ ಹೊಸಹೊಸ ಕೈಗಾರಿಕೆಗಳನ್ನು ಒಂದು ಪ್ರದೇಶದಲ್ಲಿ ಸ್ಥಾಪಿಸುವುದಕ್ಕಿಂತ, ಮೊದಲು ಹಳೆಯ ಕೈಗಾರಿಕೆಯು ಶಿಥಿಲವಾಗದೇ ಅಭಿವೃದ್ಧಿ ಹೊಂದುವ ಕಡೆ ಮುನ್ನೆಚ್ಚರಿಕೆಯ ಕಾರ್ಯಕ್ರಮ ಕೈಗೊಳ್ಳುವುದು ಸರ್ಕಾರದ ನೀತಿಯಾಗಿದೆ. ಇದನ್ನು ಶ್ರೀ ಪ್ರಭಾಕರ್ ರವರು ಒಪ್ಪುತ್ತಾರೆಂದು ಭಾವಿಸುತ್ತೇನೆ.

ಈಗ ಪ್ರಕೃತ ನೆಲಮಂಗಲದ ಪರಿಸ್ಥಿತಿ ನೋಡಿದರೆ ಈಗಾಗಲೇ ಅಲ್ಲಿ ಒಂದು ಇಂಸ್ಟ್ರಿಯಲ್ ಸ್ಕೂಲು ಸ್ಥಾಪನೆ ಆಗಿದೆ. ಇರತಕ್ಕ ಸ್ಕೂಲ್ ಯಾವ ಪರಿಸ್ಥಿತಿ ಯಲ್ಲಿದೆಯೆಂಬುದನ್ನು ಶ್ರೀ ಪ್ರಭಾಕರ್ ರವರು ಯೋಚಿಸಬೇಕೆಂದು ಹೇಳುತ್ತೇನೆ. ಆ ಸ್ಕೂಲಿನಲ್ಲಿ ಹುಡುಗರನ್ನು ಕೈಗಾರಿಕೆ ಕೆಲಸಕಾರ್ಯಗಳಲ್ಲಿ ತರಬೇತು ಮಾಡಿ ಅವರು ಸ್ವತಂತ್ರ ಜೀವನ ಮಾರ್ಗ ವನ್ನು ಕಲ್ಪಿಸಿಕೊಳ್ಳಲ ಎಂಬುದೇ ಅದನ್ನು ಸ್ಥಾಪಿ ಸಿರುವ ಉದ್ದೇಶ. ಈ ಅವಕಾಶವನ್ನು ಸದುಪಯೋ ಗಪಡಿಸಿಕೊಂಡು ಅಲ್ಲಿಯ ಹುಡುಗರು ಹೆಚ್ಚು ಸಂಖ್ಯೆ ಯಲ್ಲಿ ಕಲತುಕೊಳ್ಳಲು ಮುಂದೆ ಬಂದರೆ ಇದಕ್ಕೆ ವಿಶೇಷ ಪ್ರೋತ್ಸಾಹ ಕೊಡಲು ಅವಕಾಶವಿದೆ. ಇದಕ್ಕಾಗಿ ಇಂಡಿಯಾ ಸರ್ಕಾರದವರೂ ಸಹ ಹಣವನ್ನೊದಗಿಸಿರುತ್ತಾರೆ. ಹಣದಕೊರತೆಯೇನೂ ಇಲ್ಲ. ಮುಖ್ಯವಾಗಿ ಅಲ್ಲಿಯ ಜನರು ಮುಂದೆ ಬಂದು ಈ ಕೈಗಾರಿಯ ಸ್ಕೂಲಿನ ಪ್ರಯೋಜನ ಪಡೆದು ತಮ್ಮ ಸ್ವಶಕ್ತಿಯಿಂದ ಕೆಲಸಮಾಡತಕ್ಕ ಮನೋಭಾವವನ್ನು ತೋರಿಸಿ ಸರ್ಕಾರದ ಸಹಾಯ ವನ್ನು ಪಡೆಯಬೇಕು. Rural Industrial Scheme ನ ಉದ್ದೇಶವೇ ಇದು. ಶ್ರೀ ಪ್ರಭಾಕರ್ ರವರು ಹೇಳಿದ ಹಾಗೆ ವೀವಿಂಗ್ ಸೆಂಟರ್ ಪ್ರಾರಂಭಿಸಿ ಅದರಲ್ಲಿಯೂ ಕೆಲಸ ಮಾಡಬಹುದು. ಅದರೆ ಸಾಧಾ ರಣವಾಗಿ ಈ ವೀವಿಂಗ್ ಸೆಂಟರ್‌ನಲ್ಲಿ ನಾನು ನೋಡಿದ ಹಾಗೆ ಖರ್ಚು ಜಾಸ್ತಿ, ಉತ್ಪತ್ತಿ ಕಡಿಮೆ. ಇದಕ್ಕೆ ಮೂಲ ಕಾರಣ ತಯಾರಾದ ಸಾಮಾನುಗಳಿಗೆ ಸರಿಯಾದ ಮಾರ್ಕೆಟ್ ಇಲ್ಲದೇ ಇರುವುದು. ಈ ವೀವಿಂಗ್ ಮತ್ತು ಬಣ್ಣದ ಸಾಮಾನು ತಯಾರಿಕೆ ಯಲ್ಲದೆ, smithy section ಸಹ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಈಗಾಗಲೇ ಇಲಾಖೆ ಯವರು ಇದನ್ನು ಯೋಚಿಸುತ್ತಿದ್ದಾರೆ. ಅಲ್ಲಿರತಕ್ಕ ಪರಿಸ್ಥಿತಿ ಏನು, ಅದನ್ನು ಮಾಡತಕ್ಕದ್ದು ಸೂಕ್ತವೇ ಅಲ್ಲವೇ ಎಂಬುದನ್ನು ಕೂಲಂಕಷವಾಗಿ ಪರೀಕ್ಷೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ. ಸ್ಪೆಷಲ್ ಆಫೀ ಸರಿಗೆ ಆ ವಿಚಾರ ತಿಳಿಸುತ್ತೇವೆ. ರೂರಲ್ ಇಂಡ ಸ್ಟ್ರಿಯಲ್ ಸ್ಕೀಂ ಸ್ಪೆಷಲ್ ಆಫೀಸರು ಆ ವಿಚಾರದಲ್ಲಿ ಹೆಚ್ಚು ನಿಗಾ ತೆಗೆದುಕೊಳ್ಳುತ್ತಾರೆ. ಅಷ್ಟೇ ಅಲ್ಲದೆ ಶ್ರೀ ಪ್ರಭಾಕರ್‌ರವರು ಹೇಳಿರ ತಕ್ಕ ಅಂಶಗಳನ್ನು ಸರ್ಕಾರದವರು ಕೂಲಂಕಷವಾಗಿ ಪರಿಪಾಲನೆ ಮಾಡುತ್ತಾರೆ ಎಂಬ ಭರವಸೆಯನ್ನು ಕೊಡುತ್ತೇನೆ. ಈ ಭರವಸೆಯ ಮೇಲೆ ಶ್ರೀ ಪ್ರಭಾ ಕರ್‌ರವರು ತಮ್ಮ ನಿರ್ಣಯವನ್ನು ವಾಪಸು ತೆಗೆದು ಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Sri K. PRABHAKAR.—I wish to press the resolution, Sir.

Mr. SPEAKER.—The question is :

"That this Assembly is of the opinion that an Industrial Production Centre be started in Nelamangala Taluk to improve the most deplorable economic conditions of the labourers in the taluk."

The resolution was negatived.

No. 21.—Prohibition of Dowry System in Marriages.

***Sri G. PUTTASWAMY** (Chikmagalur-Mudigere-Scheduled Castes).—Sir, I beg to move :

"That this Assembly is of the opinion that the system of receiving dowry at the time of marriage by the bridegroom's party and the bride's party prevailing in certain communities be prohibited with a view to prevent the poor from extravagant expenditure which they would incur by raising loans and thus afford scope for the upliftment of the society."

ಸ್ವಾಮಿ, ನಮ್ಮ ಸಮಾಜದಲ್ಲಿ ವರದಕ್ಷಿಣೆ ಮತ್ತು ವಧೂದಕ್ಷಿಣೆ ತೆಗೆದುಕೊಳ್ಳುವುದು ಅನೂಚಾನವಾಗಿ ಯಾವ ಕಾರಣದಿಂದಲೋ ಯಾವ ಆಧಾರವೂ ಇಲ್ಲದೆ, ಯಾವ ನೀತಿ ನಿಯಮವೂ ಇಲ್ಲದೆ ನಡೆದುಕೊಂಡು ಬಂದಿರತಕ್ಕ ಒಂದು ದುಷ್ಟ ಪದ್ಧತಿ ಆಗಿದೆ. ಇದು ಒಂದು illegal contract. ಇದರಿಂದ ಸಮಾಜಕ್ಕೆ ಬಹಳ ಧಕ್ಕೆ, ತೊಂದರೆ ಆಗುತ್ತಾ ಇದೆ, ಜನಗಳ ಆರ್ಥಿಕಾಭಿವೃದ್ಧಿ, ವಿದ್ಯಾಭಿವೃದ್ಧಿ ಮತ್ತು ಒಟ್ಟಿನಲ್ಲಿ ದೇಶಾಭಿವೃದ್ಧಿಗೆ ತೊಂದರೆಯಾಗುತ್ತಾ ಇದೆ ಎಂಬುದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತೇ ಇರತಕ್ಕ ವಿಚಾರ. ಅದನ್ನು ನಾನು ಹೆಚ್ಚು ಲಂಬಿಸುವುದಕ್ಕೆ ಹೋಗುವುದಿಲ್ಲ. ಕೆಲವು ಪಂಗಡಗಳಲ್ಲಿ ವರದಕ್ಷಿಣೆ ಕೊಡುವ ಪದ್ಧತಿ ಇದೆ. ಕೆಲವು ಪಂಗಡಗಳಲ್ಲಿ ವಧೂದಕ್ಷಿಣೆ ಕೊಡುವ ಪದ್ಧತಿ ಇದೆ. ಹರಿಜನರಲ್ಲಿ ವಧೂದಕ್ಷಿಣೆ ಕೊಡುವ ಪದ್ಧತಿ ಈಗ ಬಹಳ ಜಾಸ್ತಿ ಆಗುತ್ತಾ ಇದೆ. ಈಗ ಆರ್ಥಿಕ ಮುಗ್ಗಟ್ಟು ಹೆಚ್ಚಿದೆ, ಹಾಗೂ ಸಾಮಾನುಗಳ ಬೆಲೆ ವಿಪರೀತವಾಗಿದೆ ; ಅದರ ಜೊತೆಗೆ ವಧೂದಕ್ಷಿಣೆ ತೆಗೆದುಕೊಳ್ಳತಕ್ಕ ಪದ್ಧತಿ ಹೆಚ್ಚಿದೆ. ಇದರಿಂದ ಸಮಾಜದಲ್ಲಿ ಅನೀತಿ ಹೆಚ್ಚಿ ಅದನ್ನು ತಡೆಗಟ್ಟುವುದಕ್ಕೆ ಬಹಳ ಕಷ್ಟವಾಗುತ್ತದೆ. ವರದಕ್ಷಿಣೆ ಆಗಲಿ, ವಧೂ ದಕ್ಷಿಣೆ ಆಗಲಿ ಕೊಡಬೇಕೆಂದರೆ ಅದಕ್ಕೆ ದುಡ್ಡು ಬೇಕು ; ಆ ಮಕ್ಕಳ ವಿದ್ಯಾಭ್ಯಾಸ ಮಾಡಿಸುವುದಕ್ಕೆ ದುಡ್ಡು ಬೇಕು. ಈ ರೀತಿ ತಮ್ಮ ಮಕ್ಕಳನ್ನು ಯಾವ ರೀತಿ ಅಭಿವೃದ್ಧಿಗೆ ತರಬೇಕೋ ಆ ರೀತಿ ತರುವುದಕ್ಕೆ ಅವರು ಅಸಹಾಯಕರಾಗಿ ಏನು ಮಾಡುವುದಕ್ಕೂ ತೋಚದೆ ಅನೇಕ ಜನ ಹೆಣ್ಣುಮಕ್ಕಳು ಮದುವೆ ಆಗದೇ ಇದ್ದಾರೆ. ಆ ರೀತಿ ಎಷ್ಟು ಜನ ಇದ್ದಾರೆ